ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 29-07-2017

# ಪತ್ರಿಕಾ ಆಮಂತ್ರಣ

1. ನೂತನವಾಗಿ ನಿರ್ಮಿಸಿರುವ ಪ್ರಾದೇಶಿಕ ಸಾರಿಗೆ ಕಛೇರಿ ಹಾಗೂ ವಾಹನ ತಪಾಸಣೆ ಮತ್ತು ಪ್ರಮಾಣೀಕರಣ ಕೇಂದ್ರಗಳ ಉದ್ಘಾಟನೆ:

ಉದ್ಘಾಟನೆ:
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು

ಮುಖ್ಯ ಅತಿಥಿಗಳು:

ಕೆ.ಜೆ. ಜಾರ್ಜ್, ಬೆಂಗಳೂರು ನಗರಾಭಿವೃದ್ಧಿ ಸಚಿವರು

ಕೃಷ್ಣ ಬೈರೇಗೌಡ, ಕೃಷಿ ಸಚಿವರು

ಎಂ. ಕೃಷ್ಣಪ್ಪ, ವಸತಿ ಸಚಿವರು

ದಿನಾಂಕ: 30-7-2017 ಭಾನುವಾರ ಸಮಯ: 1-00 ಗಂಟೆಗೆ

ಸ್ಥಳ: ರಾವುತ್ತನಹಳ್ಳಿ, ಗೌಡಹಳ್ಳಿ ಗ್ರಾಮ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು

2. ಕಲಾಗ್ರಾಮದಲ್ಲಿ ಗ್ರಾಫಿಕ್ ಕಲಾಕೇಂದ್ರ ಶಿಲಾನ್ಯಾಸ.

ಶಿಲಾನ್ಯಾಸ:

ಶ್ರೀಮತಿ ಉಮಾಶ್ರೀ, ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಅಧ್ಯಕ್ಷತೆ:
ಮುನಿರತ್ನ, ಶಾಸಕರು, ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ.

ದಿನಾಂಕ: 31-07-2017, ಸೋಮವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ.
ಸ್ಥಳ: ಬೆಂಗಳೂರಿನ ಕಲಾಗ್ರಾಮ, ನಾಗರಭಾವಿ, ಬೆಂಗಳೂರು.

.

# ಪತ್ರಿಕಾ ಪ್ರಕಟಣೆ

## ಆಗಸ್ಟ್ 1 ರಿಂದ 3 ರವರೆಗೆ
## ಸಿನಿ ಸಂಭ್ರಮ – ಸಂವಾದ

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಸಹಯೋಗದೊಂದಿಗೆ ಆಗಸ್ಟ್ 1 ರಿಂದ 3 ರವರೆಗೆ "ಸಿನಿ ಸಂಭ್ರಮ" ಬೆಳ್ಳಿ ತೆರೆಯ ವರ್ತಮಾನ ಎಂಬ ಕಾರ್ಯಕ್ರಮವನ್ನು ನಗರದ ಮಿಲ್ಲರ್ಸ್ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಹಮ್ಮಿಕೊಂಡಿದೆ.

ಆಗಸ್ಟ್ 1 ರಂದು ಸಂಜೆ 4.00 ಗಂಟೆಗೆ ನಿರ್ಮಾಪಕ ಬಿ.ಎಸ್. ಚಂದ್ರಶೇಖರ್ ಹಾಗೂ ರವೀಂದ್ರ ವೆಂಶಿ ನಿರ್ದೇಶನದ "ಪುಟಾಣಿ ಸಫಾರಿ" ಎಂಬ ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

ಈ ಸಂದರ್ಭದಲ್ಲಿ ಮಾಧ್ಯಮ ತಜ್ಞ ಜಿ.ಎನ್. ಮೋಹನ್ ಅವರಿಂದ ಸಿನಿ ಸಂಭ್ರಮ ಕುರಿತು ಮಾತನಾಡಲಿದ್ದಾರೆ. ಚಲನಚಿತ್ರ ನಿರ್ದೇಶಕ ಮಂಜುನಾಥ್ ಎಸ್. (ಮಂಸೋರೆ) ಹಾಗೂ ಕನ್ನಡಪ್ರಭ ಸಾಪ್ತಾಹಿಕ ಸಂಪಾದಕರು ಸಿನಿಮಾ ಕುರಿತು ವಿಶ್ಲೇಷಣೆ ಮಾಡುವರು.

ಆಗಸ್ಟ್ 2 ರಂದು ಸಂಜೆ 4.00 ಗಂಟೆಗೆ ನಿರ್ಮಾಪಕ ಕೆ. ಸುಧಾಕರ್ ಹಾಗೂ ಅನೂಪ್ ಆಂಟೋನಿ ನಿರ್ದೇಶನದ "ಕಥಾ ವಿಚಿತ್ರ" ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

ಈ ಸಂದರ್ಭದಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಹಾಗೂ ಪ್ರಜಾವಾಣಿ ಮುಖ್ಯ ಉಪಸಂಪಾದಕ ಚ.ಹ. ರಘುನಾಥ್ ಅವರು ಸಿನಿಮಾ ಕುರಿತು ವಿಶ್ಲೇಷಣೆ ಮಾಡುವರು.

ಆಗಸ್ಟ್ 3 ರಂದು ಸಂಜೆ 4.00 ಗಂಟೆಗೆ ನಿರ್ಮಾಪಕ ರಾಮಕೃಷ್ಣ ನಿಗಡೆ ಹಾಗೂ ರಕ್ಷಿತ್ ತೀರ್ಥಹಳ್ಳಿ ನಿರ್ದೇಶನದ "ಹೊಂಬಣ್ಣ" ಚಲನಚಿತ್ರ ಪ್ರದರ್ಶನಗೊಳ್ಳಲಿದೆ.

ಈ ಸಂದರ್ಭದಲ್ಲಿ ಹಿರಿಯ ಚಲನಚಿತ್ರ ನಿರ್ದೇಶಕ ಎಸ್. ನಾರಾಯಣ್ ಹಾಗೂ ವಿಜಯ ಕರ್ನಾಟಕದ ಸಿನಿಮಾ ಸಂಪಾದಕ ಶರಣ್ ಹುಲ್ಲೂರು ಅವರಿಂದ ಸಿನಿಮಾ ಕುರಿತು ವಿಶ್ಲೇಷಣೆ .

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ರಾಜೇಂದ್ರ ಸಿಂಗ್ ಬಾಬು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು ಸಿನಿ ಸಂಭ್ರಮದಲ್ಲಿ ಪಾಲ್ಗೊಳ್ಳುವರು.

ಪುಟಾಣಿ ಸಫಾರಿ, ಕಥಾ ವಿಚಿತ್ರ ಹಾಗೂ ಹೊಂಬಣ್ಣ ಚಿತ್ರತಂಡ ಆಯಾ ದಿನಗಳಂದು ಈ ಸಿನಿ ಸಂಭ್ರಮದಲ್ಲಿ ಪಾಲ್ಗೊಳ್ಳಲಿವೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಜೆಡಿ:ಜೆಪಿಆರ್

# <u>ಕಲಾಗ್ರಾಮದಲ್ಲಿ ಗ್ರಾಫಿಕ್ ಕಲಾಕೇಂದ್ರದ ಶಿಲಾನ್ಯಾಸ ಕಾರ್ಯಕ್ರಮ</u>

ಬೆಂಗಳೂರು, ಜುಲೈ 29 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಜುಲೈ 31 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿರುವ ದೃಶ್ಯಕಣ ಕಲಾವಿದರ ಸಂಕೀರ್ಣದಲ್ಲಿ ಮೊತ್ತ ಮೊದಲ ಕಲಾಕೇಂದ್ರವಾಗಿ ಗ್ರಾಫಿಕ್ ಕಲಾಕೇಂದ್ರ ಪ್ರಾರಂಭವಾಗುತ್ತಿದೆ.

ಈ ಗ್ರಾಫಿಕ್ ಕಲಾಕೇಂದ್ರದ ಶಿಲಾನ್ಯಾಸವನ್ನು ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ನೆರವೇರಿಸಲಿರುವರು.

ಈ ಸಮಾರಂಭದಲ್ಲಿ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಲೋಕೋಪಯೋಗಿ ಸಚಿವ ಹೆಚ್.ಸಿ. ಮಹದೇವಪ್ಪ, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯ ಡಿ .ಕೆ. ಸುರೇಶ್, ಶಾಸಕರು ಪುತ್ತೂರು ವಿಧಾನಸಭಾ ಕ್ಷೇತ್ರ ಹಾಗೂ ಸಂಸದೀಯ ಕಾರ್ಯದರ್ಶಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀಮತಿ ಶಕುಂತಲಾ ವಿ. ಶೆಟ್ಟಿ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಡಾ. ಎಂ.ಎಸ್. ಮೂರ್ತಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ರಾಜರಾಜೇಶ್ವರಿ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಮುನಿರತ್ನ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಜೆಡಿ:ಜಿಪಿಆರ್